ಸೋಲಾರ್ ವಿದ್ಯುತ್ ಸಬ್ಸಿಡಿ

232(521); ಅಪ್ಪಾಜಿ @ ಚನ್ನಬಸವರಾಜ್ ಶಂಕರರಾವ್ ನಾಡಗೌಡ (ಮುದ್ದೇಬಿಹಾಳ)

ಅ) ಸೋಲಾರ್ ವಿದ್ಯುತ್ ಉಪಯೋಗದಿಂದ ಒಂದು ವರ್ಷಕ್ಕೆ ಎಷ್ಟು ಮೆಗಾ ವಿದ್ಯುಚ್ಛಕ್ತಿಯನ್ನು ಉಳಿತಾಯ ಮಾಡಲಾಗುತ್ತದೆ (ಸಂಪೂರ್ಣ ವಿವರವನ್ನು ನೀಡುವುದು);

ಆ) ರಾಜ್ಯದಲ್ಲಿ ಸೋಲಾರ್ ವಿದ್ಯುತ್ ಸಬ್ಸಿಡಿಯನ್ನು ಯಾವ ಯಾವ ಜಿಲ್ಲೆಗಳಲ್ಲಿ ಜಾರಿಯಲ್ಲಿರುತ್ತದೆ (ವಿವರ ನೀಡುವುದು);

ಇ) ಹಾಗಿದ್ದಲ್ಲಿ, ಸೋಲಾರ್ ವಿದ್ಯುತ್ ಸಬ್ಸಿಡಿಯನ್ನು ಬಿಜಾಪುರ ಜಿಲ್ಲೆಗೆ ಮಂಜೂರು ಮಾಡುವ ಸರ್ಕಾರದ ಉದ್ದೇಶವಿದೆಯೇ (ವಿವರ ನೀಡುವುದು);

ಈ) ಎಂದಿನಿಂದ ಈ ಸೋಲಾರ್ ವಿದ್ಯುತ್ ಸಬ್ಸಿಡಿಯನ್ನು ಜಾರಿ ಮಾಡಲಾಗುತ್ತದೆ (ವಿವರ ನೀಡುವುದು)?

ಶ್ರೀ ಡಿ.ಕೆ. ಶಿವಕುಮಾರ್ (ಇಂಧನ ಸಚಿವರು)

ಅ) ಒಂದು ಮೆಗಾ ವ್ಯಾಟ್ ಸೋಲಾರ್ ವಿದ್ಯುತ್ ಉತ್ಪಾದನಾ ಘಟಕದಿಂದ ವಾರ್ಷಿಕ ಸರಾಸರಿ 1.6 ದಶಲಕ್ಷ ಯೂನಿಟ್‌ಗಳು ಉತ್ಪಾದನೆಯಾಗುತ್ತದೆ. ಅಂದರೆ ಸಾಂಪ್ರದಾಯಿಕ ಇಂಧನ ಮೂಲಗಳಿಂದ ಅಷ್ಟು ವಿದ್ಯುತ್ ಉಳಿತಾಯವಾಗುತ್ತದೆ.

ಆ) ಭಾರತ ಸರ್ಕಾರದ ನವ ಮತ್ತು ನವೀಕರಿಸಬಹುದಾದ ಇಂಧನ ಮಂತ್ರಾಲಯವು ಹುಬ್ಬಳ್ಳಿ–ಧಾರವಾಡ ನಗರ ಮತ್ತು ಮೈಸೂರು ನಗರಗಳನ್ನು ಸೋಲಾರ್ ನಗರ (Solar Cities) ಗಳನ್ನಾಗಿ ಗುರುತಿಸಿದೆ.

ರೈತರಿಗೆ ಸೌರಶಕ್ತಿ ಪಂಪ್ ಅಳವಡಿಕೆಗಾಗಿ ಕೇಂದ್ರ ಸರ್ಕಾರದ ಎಂ.ಎನ್.ಆರ್.ಇ ಯಿಂದ ದೊರಕುತ್ತಿರುವ ಶೇಕಡಾ 30 ರ ಸಹಾಯಧನದೊಂದಿಗೆ ರಾಜ್ಯ ಸರ್ಕಾರದಿಂದಲೂ ಸೂಕ್ತ ಸಹಾಯಧನ ನೀಡಲು ಮತ್ತು ಈ ಯೋಜನೆಯನ್ನು ರಾಜ್ಯದ ಎಲ್ಲಾ ಜಿಲ್ಲೆಗಳಿಗೆ ವಿಸ್ತರಿಸಲು ಸರ್ಕಾರವು ಕ್ರಮ ಕೈಗೊಳ್ಳುತ್ತಿದೆ.

ಇ) **ಮತ್ತು ಈ**) ಸರ್ಕಾರದ ಪರಿಶೀಲನೆಯಲ್ಲಿದೆ.

ಹದಗೆಟ್ಟಿರುವ ರಸ್ತೆಗಳು

233(522); ಶ್ರೀ ಅಪ್ಪಾಜಿ @ ಚನ್ನಬಸವರಾಜ್ ಶಂಕರರಾವ್ ನಾಡಗೌಡ (ಮುದ್ದೇಬಿಹಾಳ)

ಅ) ರಾಜ್ಯದಲ್ಲಿ ಲೋಕೋಪಯೋಗಿ ಇಲಾಖೆ ರಸ್ತೆಗಳು ತುಂಬಾ ಹದಗೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಕಳೆದ ಮೂರು ವರ್ಷಗಳಲ್ಲಿ ಲೋಕೋಪಯೋಗಿ ಇಲಾಖೆ ರಸ್ತೆಗಳಿಗೆ ಎಷ್ಟು ಅನುದಾನವನ್ನು ಖರ್ಚು ಮಾಡಲಾಗಿದೆ; (ವಿಧಾನ ಸಭಾವಾರು ಸಂಪೂರ್ಣ ವಿವರವನ್ನು ನೀಡುವುದು);

ಇ) 2013–14ನೇ ಸಾಲಿನ ಲೋಕೋಪಯೋಗಿ ಇಲಾಖೆಯ ರಸ್ತೆಗಳಿಗೆ ಖರ್ಚು ಮಾಡದೆ ಉಳಿದ ಅನುದಾನದ ಬಾಕಿ ಹಣ ಎಷ್ಟು;

ಈ) ಹಾಗಿದ್ದಲ್ಲಿ, ಸರ್ಕಾರದ ಮಾನದಂಡವೇನು?

ಡಾ॥ ಹೆಚ್.ಸಿ. ಮಹದೇವಪ್ಪ (ಲೋಕೋಪಯೋಗಿ ಸಚಿವರು)

ಅ) ರಾಜ್ಯದಲ್ಲಿರುವ ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆಗಳಲ್ಲಿ ಅಭಿವೃದ್ಧಿಪಡಿಸಲಾದ ರಸ್ತೆ ಉದ್ದಗಳನ್ನು ಹೊರತುಪಡಿಸಿ, ನಿರ್ವಹಣೆಗಾಗಿ ಉಳಿಯುವ ರಸ್ತೆ ಉದ್ದಗಳನ್ನು ಗಣನೆಗೆ ತೆಗೆದುಕೊಂಡು ಹಾಗೂ ಅಂತಹ ರಸ್ತೆಗಳ ಸ್ಥಿತಿಗತಿಗಳನ್ನು ಗುರುತಿಸಿಕೊಂಡು, ಆಯವ್ಯಯದಲ್ಲಿ ಲಭ್ಯವಿರುವ